ಪಿಡಬ್ಲ್ಯೂ: 5
ಸಿ.ಡಬ್ಲ್ಯೂ: 9

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ**

**ಸಿ.ಸಿ.ನಂ. 121/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಮನೋಜ |
| ತಂದೆಯ ಹೆಸರು | : | ರತ್ನಾಕರ ಬಾಡಕರ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಾಸ್ತವ್ಯ | : | ಶಿರವಾಡ, ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆ: 10-08-2022

**ದಂಡ ಪ್ರಕ್ರಿಯೇ ಸಂಹಿತೆ ಕಲಂ. 299 ರಡಿ ಸಾಕ್ಷಿಯ ಹೇಳಿಕೆ:**

**ಮುಖ್ಯ ವಿಚಾರಣೆ: ಮಾನ್ಯ ಹಿರಿಯ ಸ ಸ ಅ ರವರಿಂದ:**

ನನಗೆ ಚಾಸಾ.8 ರವರ ಪರಿಚಯ ಇರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ. ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿಲ್ಲ ಹಾಗೂ ಯಾವುದೆ ಅಭರಸಗಳನ್ನು ವಶಪಡಿಸಿಕೊಂಡಿಲ್ಲ. ಈಗ ತೋರಿಸಿದ ದಾಖಲೆಗಳಲ್ಲಿರುವ ಸಹಿ ನನ್ನದು. ಅದಕ್ಕೆ 5 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೆ. ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ ಸ ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟಿ ಸವಾಲು: ಮಾನ್ಯ ಹಿರಿಯ ಸ ಸ ಅ ರವರಿಂದ:**

ದಿ: 14-02-2017 ರಂದು 2 ನೇ ಆರೋಪಿಯು ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ವಾಹನದಲ್ಲಿ ಅಡಗಿಸಿಟ್ಟಿದ್ದಾಗಿ ಹೇಳಿ ಠಾಣೆಯ ಆವರಣದಲ್ಲಿದ್ದ ಟಾಟಾ-ಎಎಸ್ ವಾಹನ ನಂ. ಜಿಎ-05-ಟಿ-4266 ನೇದರ ಸೀಟಿನಡಿಯಲ್ಲಿ ಅಡಗಿಸಿಟ್ಟ ಬಂಗಾರದ ಒಂದು ನೆಕ್ಲೇಸ್ , ಒಂದು ಜೊತೆ ಬಂಗಾರದ ಕಿವಿಯ ರಿಂಗ್, ಒಂದು ಜೊತೆ ಬಂಗಾರದ ಕಿವಿಯ ಚೈನ್ , ಒಂದು ಬಂಗಾರದ ಉಂಗುರ, ಒಂದು ಬೆಳ್ಳಿಯ ಬ್ರಾಸ್ಲೇಟ್ ನ್ನು

ಪಿಡಬ್ಲ್ಯೂ 5

ಸಿ.ಡಬ್ಲ್ಯೂ 9

ಹಾಜರುಪಡಿಸಿದ್ದು ಅದನ್ನು ವಶಪಡಿಸಿಕೊಂಡು ಪೊಲೀಸರು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿ ಆಭರಣಗಳನ್ನು ವಶಪಡಿಸಿಕೊಂಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಮುಖ್ಯ ನಾಯಿಕ ದಂಡಾಧಿಕಾರಿಗಳು,

ಕಾರವಾರ